# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಬನಹಟ್ಟಿ

**ಸಿ.ಸಿ.ನಂ.28/2022**

1) ಶ್ರೀ.ಬಸಯ್ಯ ತಂ.ಮಹಾದೇವ ಕುರ್ಣಿ,
ಸಾಃ ಆಸಂಗಿ.

.....ಫಿರ್ಯಾದಿದಾರ

– ವಿರುದ್ಧ –

1) ಶ್ರೀ.ಪ್ರಕಾಶ ತಂ.ಮಹಾದೇವ ನಾವಿ,
ಸಾಃ ಆಸಂಗಿ.

......ಆರೋಪಿ

## – ಆಪಾದನೆ –

ನಾನು ಶ್ರೀಮತಿ ಶುಷ್ಮ ಟಿ.ಸಿ. ಬಿ.ಕಾಂ., ಎಲ್.ಎಲ್.ಬಿ., ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು ಬನಹಟ್ಟಿ , ತಾ:ರಬಕವಿ-ಬನಹಟ್ಟಿ ಹೊರೆಸುವ ಆಪಾದನೆ ಏನೆಂದರೆ,

ಆರೋಪಿಯಾದ ನೀವು ಫಿರ್ಯಾದಿದಾರರಿಗೆ ಕಾನೂನುಬದ್ಧವಾಗಿ ಕೊಡಬೇಕಾಗಿದ್ದ ರೂ.1,00,000/- ಗಳ ಪಾವತಿಗಾಗಿ ದಿನಾಂಕ 15-12-2021 ರಂದು ನಿಮ್ಮ ಖಾತೆ ಇರುವ ವಿಜಯ ಬ್ಯಾಂಕ್ ಶಾಖೆ ಬನಹಟ್ಟಿ ಬ್ಯಾಂಕಿನ ಚೆಕ್ ನಂ.459352 ನ್ನು ರೂ.1,00,000/-ಗಳಿಗೆ ಫಿರ್ಯಾದಿದಾರನಿಗೆ ನೀಡಿದ್ದು, ಅವರು ಸದರಿ ಚೆಕ್ಕನ್ನು ತಮ್ಮ ಬ್ಯಾಂಕಿನ ಮೂಲಕ ನಗದೀಕರಿಸಲು ಹಾಕಿದಾಗ ನಿಮ್ಮ ಬ್ಯಾಂಕಿನವರು **"Funds insufficient"** ಎನ್ನುವ ಹಿಂಬರಹದೊಂದಿಗೆ ದಿನಾಂಕ 27-12-2021 ರಂದು ಸದರಿ ಚೆಕ್ ನಗದೀಕರಣವಾಗದೇ ವಾಪಸ್ಸು ಬಂದಿದ್ದು, ಆ ಬಗ್ಗೆ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ನಿಮಗೆ ದಿನಾಂಕ 31-12-2021 ರಂದು ಲೀಗಲ್ ನೋಟೀಸನ್ನು ನೀಡಿದ್ದು, ಸದರಿ ನೋಟೀಸನ್ನು ಆರೋಪಿಯಾದ ನೀವು ದಿನಾಂಕ 03-01-2022 ರಂದು ಸ್ವೀಕರಿಸಿದ್ದು, ನಂತರ 15 ದಿನಗಳು ಕಳೆದರೂ ಸಹ ನೀವು ಚೆಕ್ಕಿನಲ್ಲಿ ನಮೂದಿಸಿದ ಹಣ ಪಾವತಿಸದೇ ಲಿಖಿತ ವರ್ಗಾವಣೆಗಳ ಕಾಯ್ದೆ (N.I.Act) ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿ ಅಂತಾ ಆಪಾದಿಸಲಾಗಿದೆ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?
ಉತ್ತರಃ- ತಿಳಿಯಿತು.

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೊ ?
ಉತ್ತರಃ- ಸುಳ್ಳು - ವಿಚಾರಣೆಯಾಗಬೇಕು.

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

Sd/-
ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಬನಹಟ್ಟಿ.

ಸ್ಥಳ : ಬನಹಟ್ಟಿ
ದಿನಾಂಕ : 11-08-2022